# ಗಣಿತ ವಿಷಯದ ಸೂಚನೆಗಳು

1) ಕೋವಿಡ್ 19ರ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಲಭ್ಯವಿರುವ ಶೈಕ್ಷಣಿಕ ಅವಧಿಗೆ ಪೂರಕವಾಗಿ ನಲಿ-ಕಲಿ ತರಗತಿಗಳಿಗಾಗಿ ಅಗತ್ಯ ಕಲಿಕಾ ಅಂಶಗಳನ್ನು ಆಧರಿಸಿ ಚಟುವಟಿಕೆಗಳನ್ನು ನಿಗದಿಪಡಿಸಲಾಗಿದೆ.

2) ಪ್ರತಿ ದಿನ 80 ನಿಮಿಷಗಳ ಪ್ರತಿಅವಧಿಯಂತೆ ಈ ಕಲಿಕಾ ಪ್ರಕ್ರಿಯೆ ನಡೆಯುತ್ತದೆ.

3) 2020-21ನೇ ಶೈಕ್ಷಣಿಕಸಾಲಿನಲ್ಲಿ ತರಗತಿಗಳು ಪ್ರಾರಂಭವಾಗದೇ, ಈ(2021-22) ಶೈಕ್ಷಣಿಕ ಸಾಲಿನಲ್ಲಿ 1 ಮತ್ತು 2ನೇ ತರಗತಿಯ ಮಕ್ಕಳು ಯಾವುದೇ ಔಪಚಾರಿಕ ಕಲಿಕೆಯನ್ನು ಮಾಡದೆ ಹಾಲಿ ತರಗತಿಗಳಿಗೆ ದಾಖಲಾಗಿರುವುದರಿಂದ ಕಲಿಕಾ ಪ್ರಕ್ರಿಯೆಯ ದೃಷ್ಟಿಯಿಂದ ಒಂದೇ ಕೊಠಡಿಯಲ್ಲಿ **1 ಮತ್ತು 2ನೇ ತರಗತಿಗಳನ್ನು ಒಂದು ಗುಂಪಾಗಿ ಹಾಗೂ 3ನೇ ತರಗತಿಯನ್ನು ಇನ್ನೊಂದು ಗುಂಪಾಗಿ** ಪರಿಗಣಿಸುವುದು. ಅಂದರೆ ಒಂದೇ ಕೊಠಡಿಯಲ್ಲಿ ಎರಡು ಗುಂಪುಗಳಲ್ಲಿ ಕಲಿಕೆ ನಡೆಯುತ್ತದೆ. 80 ನಿಮಿಷಗಳಲ್ಲಿ ಮೊದಲ 40 ನಿಮಿಷ 1 ಮತ್ತು 2ನೇ ತರಗತಿಗಳಿಗೂ ನಂತರದ 40 ನಿಮಿಷಗಳನ್ನು 3ನೇ ತರಗತಿಯ ಶಿಕ್ಷಕರ ಸಂಪೂರ್ಣ ಸಹಾಯದ (ಕಲಿಕಾಂಶ ಚಟುವಟಿಕೆಗಳಿಗೆ) ಕಲಿಕೆಗೆ ಮೀಸಲಿರಿಸಿಕೊಳ್ಳುವುದು. 1 ಮತ್ತು 2ನೇ ತರಗತಿಗೆ **ಕಲಿಕಾಂಶ ಚಟುವಟಿಕೆ** ನಡೆಯುವಾಗ 3ನೇ ತರಗತಿಗೆ **ಪುನರ್ಬಲನ ಮತ್ತು ಮೌಲ್ಯಮಾಪನ ಚಟುವಟಿಕೆಗಳು** ನಡೆಯುವಂತೆ ವ್ಯವಸ್ಥೆ ಮಾಡುವುದು. ಹಾಗೇ 3ನೇ ತರಗತಿಗೆ **ಕಲಿಕಾಂಶ ಚಟುವಟಿಕೆ** ನಡೆಯುವಾಗ 1 ಮತ್ತು 2ನೇ ತರಗತಿಗೆ **ಪುನರ್ಬಲನ ಮತ್ತು ಮೌಲ್ಯಮಾಪನ** ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆ ಮಾಡುವುದು

4) ಸಮಯವನ್ನು ಗಮನದಲ್ಲಿಟ್ಟುಕೊಂಡು 1.2 ನೇ ತರಗತಿಯ ಕೆಲವು ಮೈಲುಗಲ್ಲುಗಳನ್ನು ಕೈಬಿಡಲಾಗಿದ್ದು ಇವುಗಳನ್ನು ಮುಂದಿನ ತರಗತಿಯಲ್ಲಿನ ಪರಿಕಲ್ಪನೆಗಳೊಂದಿಗೆ ಅರ್ಥೈಸುವುದು.

ಉದಾ: 1ನೇ ತರಗತಿಯಲ್ಲಿ **ಮಿಶ್ರಕ್ರಿಯೆ, ದತ್ತಾಂಶಗಳು, ಸಮಮಿತಿ** & **ವಿನ್ಯಾಸಗಳು**

2ನೇ ತರಗತಿಯಲ್ಲಿ **ದತ್ತಾಂಶಗಳು** & **ಸಮಮಿತಿ ವಿನ್ಯಾಸಗಳು**

5) 3ನೇ ತರಗತಿಯಲ್ಲಿ ಯಾವುದೇ ಕಲಿಕಾಂಶ ಬಿಟ್ಟಿಲ್ಲ.

ಈ ಕರೋನಾದ ವಿಶೇಷ ಸಂದರ್ಭದಲ್ಲಿ ಕಲಿಕಾ ಪ್ರಕ್ರಿಯೆಯನ್ನು **ಕಲಿಕಾಂಶ, ಪುನರ್ಬಲನ ಮತ್ತು ಮೌಲ್ಯಮಾಪನ** ಈ 3 ಗುಂಪುಗಳಲ್ಲಿ ಮಾತ್ರ ನಡೆಸಲು ತೀರ್ಮಾನಿಸಲಾಗಿದೆ.

6) ಹಾಲಿ ಇರುವ ಕಲಿಕಾ ಸಾಮಗ್ರಿಗಳೊಂದಿಗೆ ಹೆಚ್ಚುವರಿ ಸಾಮಗ್ರಿಗಳ ಅವಶ್ಯಕತೆ ಬಿದ್ದಲ್ಲಿ, ಅವಶ್ಯಕತೆಗೆ ತಕ್ಕಂತೆ ಸಾಮಗ್ರಿಗಳನ್ನು ಶಿಕ್ಷಕರೇ ಸಿದ್ಧಪಡಿಸಿಕೊಳ್ಳುವುದು. ಇಂತಹ ಸನ್ನಿವೇಶಗಳಲ್ಲಿ ಕೋವಿಡ್-19ರ ಸಂದರ್ಭದಲ್ಲಿ ಅನುಸರಿಸಬೇಕಾದ ಎಸ್.ಓ.ಪಿ.ಯನ್ನು ಗಮನದಲ್ಲಿರಿಸಿಕೊಳ್ಳುವುದು.

7) ಚಟುವಟಿಕೆಗಳನ್ನು ಮಾಡುವಾಗ ಕೋವಿಡ್-19ರ ಸಂದರ್ಭವನ್ನು ಗಮನದಲ್ಲಿರಿಸಿಕೊಂಡು ಮಕ್ಕಳ ನಡುವೆ ಸೂಕ್ತ ಅಂತರ ಕಾಪಾಡಿಕೊಳ್ಳುವುದರೊಂದಿಗೆ ಕಲಿಕಾ ಸಾಮಗ್ರಿಗಳನ್ನು ತೆಗೆದುಕೊಳ್ಳುವ ಮತ್ತು ಮರಳಿ ಇರಿಸುವ ಕಾರ್ಯವನ್ನು ಶಿಕ್ಷಕರೇ ನಿರ್ವಹಿಸುವುದು.

8) ಕಲಿಕಾ ಪ್ರಕ್ರಿಯೆಯನ್ನು 3 ಗುಂಪುಗಳಲ್ಲಿ ನಿರ್ವಹಿಸಲಾಗಿದೆ. **ಕಲಿಕಾಂಶ, ಪುನರ್ಬಲನ ಮತ್ತು ಮೌಲ್ಯಮಾಪನ.**

9) ಮೂರೂ ತರಗತಿಗಳಲ್ಲಿನ ಕಲಿಕಾ ಪೂರಕ ಹಂತದಲ್ಲಿನ **ಆಡಿ ಕಲಿಯೋಣ** ಚಟುವಟಿಕೆಗಳನ್ನು ಕೈ ಬಿಡಲಾಗಿದೆ.

10) 3ನೇ ತರಗತಿಯ ಬಳಕೆ ಹಂತದ ಉತ್ತರ ಹೇಳುವೆ ಚಟುವಟಿಕೆ ಮತ್ತು 1ನೇ ತರಗತಿಯ **ಆಮೆ ಫಜಲ್ ಚಟುವಟಿಕೆಯನ್ನು** ಮಾತ್ರ ಉಳಿಸಿಕೊಂಡು ಉಳಿದ ಚಟುವಟಿಕೆಗಳಾದ **ಆಟ ಆಡೋಣ, ವಿನೋದ ಗಣಿತ, ಗಣಕಯಂತ್ರ** ಚಟುವಟಿಕೆಗಳನ್ನು ಕೈ ಬಿಡಲಾಗಿದೆ.